ದಿನಾಂಕಃ 20.08.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀಸವಾಲುಃ ಪ್ರತಿವಾದಿಯರ ಪರ ಶ್ರೀ. ಎಮ್. ಆರ್. ಬಿ  ವಕೀಲರಿಂದಃ</u>**

ಧೂಪದಾಳ ಮತ್ತು ಮಲ್ಲಾಪೂರ ಪಿ ಜಿ ಗ್ರಾಮಗಳು ಮಮದಾಪೂರ ಗ್ರಾಮದಿಂದ 35 ಕಿ.ಮೀ ಅಂತರದಲ್ಲಿರುತ್ತವೆ  ಎಂದರೆ ನಿಜ.  ಸದರಿ ಧೂಪದಾಳ ಮತ್ತು ಮಲ್ಲಾಪೂರ ಪಿ ಜಿ ಗ್ರಾಮಗಳಲ್ಲಿ ನಮಗೆ ಸೇರಿದ ಯಾವುದೇ ಆಸ್ತಿಗಳು ಇರುವುದಿಲ್ಲ. ನನ್ನ ,  ನನ್ನ ಗಂಡ ಮತ್ತು ಮಕ್ಕಳ ಚುನಾವಣಾ ಗುರುತಿನ ಚೀಟಿ ಹಾಗೂ ಕುಟುಂಬದ ಪಡಿತರ ಚೀಟಿಗಳು ಮಮದಾಪೂರ ಗ್ರಾಮದಲ್ಲಿ ಇರುತ್ತವೆ ಎಂದರೆ ನಿಜ. ಸರ್ವೆ ನಂಬರ 46/4,  ಕ್ಷೇತ್ರ 27 ಗುಂಟೆ  ಜಮೀನು ಬಿನ್ ಶೇತ್ಕಿ ಜಮೀನು ಇರುವ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ಜಮೀನು ಶೇತ್ಕಿ ಜಮೀನು ಇರುತ್ತದೆಯೋ ಅಥವಾ ಬಿನ್ ಶೇತ್ಕಿ ಜಮೀನು ಇರುತ್ತದೆಯೋ ಎಂದು ನಾನು ನಮ್ಮ ವಕೀಲರಿಗೆ ಮಾಹಿತಿ ನೀಡಿಲ್ಲ. ಸದರಿ ಸಂಗತಿಗಳ ಬಗ್ಗೆ ನನ್ನ ಅಳಿಯ ಅಂದರೆ 1 ನೇ ವಾದಿ  ವಿರೂಪಾಕ್ಷ  ಮಾಹಿತಿ ನೀಡಿರುತ್ತಾನೆ.  ಸಾಕ್ಷಿ ಮುಂದುವರೆದು ನನಗೆ ಗೊತ್ತಿದಷ್ಟು ಮಾಹಿತಿಯನ್ನು ಹೇಳಿರುತ್ತೇನೆ.  ನನ್ನ  ಸಾಕ್ಷಿ ಪ್ರಮಾಣಪತ್ರಕ್ಕೆ ನನ್ನ ಅಳಿಯ 04 ವರ್ಷಗಳ ಹಿಂದೆ ಮಾಹಿತಿ ನೀಡಿರುತ್ತಾನೆ. ಆತ ಮಾಹಿತಿ ಕೊಟ್ಟ ಪ್ರಕಾರ ನಾನು ಅದಕ್ಕೆ ಸಹಿ ಮಾಡಿರುತ್ತೇನೆಂದರೆ ನಿಜ.  ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರಕ್ಕೆ  ಸಹಿ ಮಾಡಿ 04 ವರ್ಷಗಳು ಆಗಿರುತ್ತವೆ.  ಸಾಕ್ಷಿ ಮುಂದುವರೆದು ಈಗ 04 ತಿಂಗಳ ಹಿಂದೆ ನಾನು ಸಹಿ ಹಾಕಿದ್ದು, ಅದಕ್ಕಿಂತ ಮುಂಚೆ ನನ್ನ ಅಳಿಯ ನ್ಯಾಯಾಲಯಕ್ಕೆ ಬರುತ್ತಿದ್ದು, ನನಗೆ ಅದರ ಬಗ್ಗೆ  ಮಾಹಿತಿ ಇಲ್ಲ.  ಮುಖ್ಯ ವಿಚಾರಣೆಯ ಪ್ರಮಾಣಪತ್ರಕ್ಕೆ ಸಹಿ ಮಾಡುವಾಗ ನನ್ನ ಅಳಿಯ ಹಾಜರು ಇದ್ದನು.

ಅವರು ಹೇಳಿದ ಮೇರೆಗೆ ನಾನು ಸಹಿ ಹಾಕಿರುತ್ತೇನೆ. ದಾವಾ ಆಸ್ತಿಗಳ ನಂಬರಗಳನ್ನು ನನ್ನ ಅಳಿಯ ಬರೆಸಿರುತ್ತಾನೆ.

ಮೃತ ಗುರುಲಿಂಗಪ್ಪನ ಕಾಯ್ದೆ ಬದ್ಧ ಹೆಂಡತಿ ಪಾರ್ವತಿ ಇರುತ್ತಾಳೆಂದರೆ ನಿಜ. ಅವರ ಮದುವೆಯು ಸನ್ 1969-70 ರಲ್ಲಿ ಆಗಿರುತ್ತದೆ. ಅವರ ಮದುವೆ ಯಾವ ಊರಿನಲ್ಲಿ ಆಗಿರುತ್ತದೆಂದು ನನಗೆ ಗೊತ್ತಿಲ್ಲ. ಸದರಿ ಗುರುಲಿಂಗಪ್ಪ ಹಾಗೂ ಪಾರ್ವತಿಯ ಮದುವೆಯು ಅವರ ಜಾತೀ, ರಿವಾಜು ಪ್ರಕಾರ ನೆರವೇರಿರುತ್ತದೆಂದರೆ ನಿಜ. ಘಟಪ್ರಭಾ ಹಾಗೂ ಮಮದಾಪೂರ ಗ್ರಾಮಗಳಲ್ಲಿ ಸದರಿ ಗುರುಲಿಂಗಪ್ಪ ಹಾಗೂ ಪಾರ್ವತಿಯನ್ನು ಕಾಯ್ದೆ ಬದ್ಧ ಗಂಡ- ಹೆಂಡತಿ ಎಂದು ಗುರುತಿಸುತ್ತಾರೆಂದರೆ ನಿಜ. ಗುರುಲಿಂಗಪ್ಪ ತೀರಿಕೊಂಡ ನಂತರ ಪಾರ್ವತಿಯನ್ನು ಆತನ ವಿಧವೆ ಇರುತ್ತಾಳೆ ಎಂದು ಗುರುತಿಸುತ್ತಾರೆಂದರೆ ನಿಜ. ಸದರಿ ಗುರುಲಿಂಗಪ್ಪ ಹಾಗೂ ಪಾರ್ವತಿಯ ಮದುವೆಯು ಯಾವ ಕಾಲಕ್ಕೂ ನ್ಯಾಯಾಲಯದಲ್ಲಿ ವಿಚ್ಚೇಧನವಾಗಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ.

ಸದರಿ ಗುರುಲಿಂಗಪ್ಪ ಹಾಗೂ ಪಾರ್ವತಿಯ ದಾಂಪತ್ಯ ಜೀವನದಿಂದ ಕಲಾವತಿ ಹಾಗೂ ನಾಗಪ್ಪ ಎಂಬ ಇಬ್ಬರು ಮಕ್ಕಳು ಜನಿಸಿರುತ್ತಾರೆಂದರೆ ಸಾಕ್ಷಿಯು ಕಲಾವತಿಯ (2ನೇ ಪ್ರತಿವಾದಿ) ಬಗ್ಗೆ ಮಾತ್ರ ಗೊತ್ತಿದ್ದು, ನಾಗಪ್ಪನ ಬಗ್ಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ 2 ನೇ ಪ್ರತಿವಾದಿಯು ಮಮದಾಪೂರ ಗ್ರಾಮದಲ್ಲಿ ವಿದ್ಯಾಭ್ಯಾಸ ಮಾಡಿ, ಅದೇ ಗ್ರಾಮದಲ್ಲಿ ಸರಕಾರಿ ಶಾಲೆಯಲ್ಲಿ ಶಿಕ್ಷಕಿಯಾಗಿ ಸೇವೆ ಸಲ್ಲಿಸುತ್ತಿದ್ದಾಳೆ. ಸದರಿ ಪಾರ್ವತಿಯು ಗುರುಲಿಂಗಪ್ಪನನ್ನು ಬಿಟ್ಟುಹೋಗಿರುತ್ತಾಳೆಂಬ ಮಾಹಿತಿಯನ್ನು ನನ್ನ ಅಳಿಯ ಕೊಟ್ಟಿರುತ್ತಾನೆಂದರೆ ಸಾಕ್ಷಿಯು ಹೌದು ಎಂದು ನುಡಿದು ನಂತರ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ಸದರಿ ಪಾರ್ವತಿಯು ಗುರುಲಿಂಗಪ್ಪನನ್ನು ಬಿಟ್ಟುಹೋಗಿರುತ್ತಾಳೆ ಎಂಬ ಮಾಹಿತಿಯನ್ನು ನನ್ನ ಅಳಿಯ ಹೇಳಿ ಬರೆಸಿರುತ್ತಾನ್ನೆವ ಸಂಗತಿ ನಿಜ ಇದ್ದು, ಆ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇರುವುದಿಲ್ಲ. ಸದರಿ ಗುರುಲಿಂಗಪ್ಪ ಗೋವಾದಲ್ಲಿ ತಾರಾಮತಿಯನ್ನು ಮದುವೆಯಾಗಿರುತ್ತಾನೆಂಬ ವಿಷಯವನ್ನು ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಿ ಹೇಳಿ ಬರೆಸಿರುತ್ತಾನೆಂದರೆ ನಿಜ. ಸದರಿ ತಾರಾಮತಿಯನ್ನು ಮದುವೆಯಾದ ತಿಂಗಳು, ದಿನಾಂಕ ಹಾಗೂ ವರ್ಷ ನನಗೆ ಹೇಳಲು ಆಗುವುದಿಲ್ಲ ಆದರೆ 50-52 ರಿಂದ ವರ್ಷಗಳಾಗಿರಬಹುದು. ಆ ಸಮಯದಲ್ಲಿ ನಾನು 9 ರಿಂದ 10 ವರ್ಷದವಳು ಇರಬಹುದು. ನಮ್ಮ ತಂದೆ ತಾಯಿಗೆ ನಾನೇ ಹಿರಿಯ ಮಗಳು ಇರುತ್ತೇನೆ. ನನಗೆ 15 ರಿಂದ 16 ನೇ ವಯಸ್ಸಿ ನಲ್ಲಿ ನನಗೆ ತಿಳಮವಳಿಕೆ ಬಂದಿರುತ್ತದೆ. ಸದರಿ ತಾರಾಮತಿ ಹಾಗೂ ಗುರುಲಿಂಗಪ್ಪನ ಮದುವೆಯ ಭಾವಚಿತ್ರವಾಗಲೀ, ಮದುವೆಯ ಯಾದಿಯಾಗಲೀ ನೋಡುವ ಪ್ರಸಂಗ ನನಗೆ ಇವತ್ತಿನವರೆಗೂ ಬಂದಿರುವುದಿಲ್ಲ.

ನನ್ನ ಮಗಳನ್ನು 1ನೇ ವಾದಿಗೆ 2002 ರಲ್ಲಿ ಮದುವೆ ಮಾಡಿಕೊಟ್ಟಿರುತ್ತೇನೆ. ಸದರಿ ಮದುವೆಯು ಯಾವ ಗ್ರಾಮದಲ್ಲಿ ನೆರವೇರಿರುತ್ತದೆಂದು ಎಂದು ನನಗೆ ಈಗ ನೆನಪಿಲ್ಲ. ಸದರಿ ಮದುವೆಯ ವಿವಾಹ ಆಮಂತ್ರಣ ಪತ್ರಿಕೆ , ವಿವಾಹ ಯಾದಿ ಇರುತ್ತವೆ. ಸದರಿ ಮದುವೆಗೆ ಗುರುಲಿಂಗಪ್ಪ , ಪಾರ್ವತಿ, 2 ನೇ ಪ್ರತಿವಾದಿ ಕಲಾವತಿ ಯಾರೂ ಬಂದಿರಲಿಲ್ಲ. ಸದರಿ ಮದುವೆಯ ಆಮಂತ್ರಣ ಪತ್ರಿಕೆಯನ್ನು ನಾವು ಕೂಡ ಮುದ್ರಣ ಮಾಡಿಸಿದ್ದು, ನ ಮ್ಮ ಅಳಿಯ ಸಹ ಮುದ್ರಣ ಮಾಡಿಸಿದ್ದರು. ನನ್ನ ಅಳಿಯ ಅಂದರೆ 1ನೇ ವಾದಿ ತನ್ನ ಸಾಕ್ಷ್ಯದಲ್ಲಿ ಇವತ್ತಿನವರೆಗೂ ಮದುವೆಯ ಆಮಂತ್ರಣ ಪತ್ರಿಕೆಯನ್ನಾಗಲೀ ಅಥವಾ ಯಾದಿಯನ್ನಾಗಲೀ ಹಾಜರುಪಡಿಸಿಲ್ಲ

ಎಂದರೆ ನನಗೆ ಗೊತ್ತಿಲ್ಲ. ನನ್ನ ಮಗಳನ್ನು 1 ನೇ ವಾದಿಗೆ ಮದುವೆ ಮಾಡಿಕೊಡುವ ಕಾಲಕ್ಕೆ ಗುರುಲಿಂಗಪ್ಪನ ಮೊದಲ ಹೆಂಡತಿ ಪಾರ್ವತಿ ಹಾಗೂ ಆತನಿಗೆ 2 ನೇ ಪ್ರತಿವಾದಿ ನಾಗಪ್ಪ ಎಂಬ ಮಕ್ಕಳು ಇದ್ದ ಬಗ್ಗೆ ನನಗೆ ಗೊತ್ತಿತ್ತು.

ಗುರುಲಿಂಗಪ್ಪ ಹಾಗೂ ತಾರಾಮತಿಯ ಮದುವೆಯು ಗೋವಾದಲ್ಲಿ ಆಗಿರುತ್ತದೆಂಬ ವಿಷಯವನ್ನು ನನ್ನ ಅತ್ತೆ ಗಂಗವ್ವ ಈರಪ್ಪ ವಾಲಿ ಹಾಗೂ ಮಾವ ಈರಪ್ಪ ಮಲ್ಲಪ್ಪ ವಾಲಿ ರವರು ನನಗೆ ಹೇಳಿರುತ್ತಾರೆ. ಸದರಿ ನನ್ನ ಅತ್ತೆ ಹಾಗೂ ಮಾವ ತೀರಿಕೊಂಡಿರುತ್ತಾರೆ. ಸದರೀರವರನ್ನು ಹೊರತುಪಡಿಸಿ ಗುರುಲಿಂಗಪ್ಪ ಹಾಗೂ ತಾರಾಮತಿಯ ಮದುವೆಯ ಬಗ್ಗೆ ಯಾರೂ ನನಗೆ ಹೇಳಿರುವುದಿಲ್ಲ.

**(ಈ ಹಂತದಲ್ಲಿ ಮುಂದುವರೆದ ಪಾಟೀಸವಾಲಿಗೆ ಸಮಯ ಕೋರಿದ್ದು, ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ ರೀತಿ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ

Sd/-
(ಮಹಾದೇವ ಕಾನಟ್ಟಿ)
2ನೇ ಹೆಚ್ಚುವರಿ ಹಿರಿಯ ದಿವಾಣಿ
ನ್ಯಾಯಾಧೀಶರು, ಗೋಕಾಕ

ಸಾಕ್ಷಿಯ ಸಹಿ